ಸಂಯುಕ್ತ ಕರ್ನಾಟಕ



ಜೈನ್ ವಿವಿಯ 5ನೇ ಘಟಿಕೋತ್ಸವದಲ್ಲಿ ಡಾಕ್ಟರೇಟ್ ಪಡೆಯುತ್ತಿರುವ ಗಾಯಕಿ ಕವಿತಾ ಕೃಷ್ಣಮೂರ್ತಿ ಸುಬ್ರಹ್ಮಣ್ಯಂ.

# ಕವಿತಾ ಕೃಷ್ಣಮೂರ್ತಿಗೆ ಗೌರವ ಡಾಕ್ಟರೇಟ್

**ಬೆಂಗಳೂರು**

ಜೈನ್ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ ಘಟಿಕೋತ್ಸವದಲ್ಲಿ ಸಂಗೀತ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ ಗಾಯಕಿ ಕವಿತಾ ಕೃಷ್ಣಮೂರ್ತಿ ಸುಬ್ರಹ್ಮಣ್ಯಂ ಅವರಿಗೆ ಗೌರವ ಡಾಕ್ಟರೇಟ್ ಸೇರಿದಂತೆ ವಿದ್ಯಾರ್ಥಿಗಳಿ 2374 ಪದವೀಧರರಿಗೆ ಪದವಿ ಪ್ರದಾನ ಮಾಡಲಾಯಿತು. ಅಲ್ಲದೇ 64 ಪದವೀಧರರಿಗೆ ಚಿನ್ನದ ಪದಕ ನೀಡಿ ಗೌರವಿಸಲಾಯಿತು.

ಘಟಿಕೋತ್ಸವದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕುಲಪತಿಗಳಾದ ಡಾ.ಎನ್.ನಾಗೇಂದ್ರ ಮಾತನಾಡಿ, ಶಿಕ್ಷಣ ಎಂಬುದು ವಿಷಯಗಳನ್ನು ತಲೆಯಲ್ಲಿ ಕಲೆಹಾಕುವುದಲ್ಲ. ಬದಲಾಗಿ ಬೌದ್ಧಿಕ ತೀಕ್ಷ್ಣತೆಯನ್ನು ತೀವ್ರ ಮಾಡುವುದು. ಅದಕ್ಕಾಗಿ ಏಕಾಗ್ರತೆ ಅಗತ್ಯವಾಗಿರುತ್ತದೆ ಎಂದು ಹೇಳಿದರು.

ಹೊಳ ಬೆಳವಣಿಗೆ ಹೊಸ ಕಾರ್ಯಕ್ರಮಗಳನ್ನು ಅರಸಿ ನಾವು ಉತ್ಕೃಷ್ಟತೆಯ ಮಾರ್ಗದಲ್ಲಿ ಸಂಚರಿಸಬೇಕಾದರೆ ಹಲವಾರು ಸವಾಲುಗಳು ನಮ್ಮನ್ನು ಎದುರುಗೊಳ್ಳುತ್ತವೆ. ಯೋಗ ಹಾಗೂ ಆಧ್ಯಾತ್ಮಿಕ ಮಾರ್ಗ ನಿಜಕ್ಕೂ ಇಂತಹ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸಲು ಬಹುಮುಖಿ ಪರಿಣಾಮಕಾರಿ ವಿಧಾನಗಳನ್ನು ತೆರೆದಿಡುತ್ತದೆ. ಸಹಜವಾಗಿ ಇದು ಬೌದ್ಧಿಕ ತಿಳುವಳಿಕೆ, ಬದ್ಧತೆ ಹಾಗೂ ಹೆಚ್ಚಿನ ಸಂಕಲ್ಪವನ್ನು ಜನರಿಂದ ನಿರೀಕ್ಷಿಸುತ್ತದೆ. ಈ ನಿಟ್ಟಿನಲ್ಲಿ, ಇದನ್ನು ಯಶಸ್ವಿಯಾಗಿ ಕೈಗೊಳ್ಳಬಹುದಾದ ಹಲವಾರು ಪ್ರತಿಭಾನ್ವಿತ ಯುವ ಮುಖಗಳನ್ನು ನಾನು ಇಲ್ಲಿ ನೋಡುತ್ತಿದ್ದೇನೆ ಎಂದು ವಿದ್ಯಾರ್ಥಿಗಳನ್ನು ಪ್ರಶಂಸಿದರು.

ಅತುಲ್ ಭಟ್, ದಿವ್ಯಾ ಸಿ, ಅಭಿಶೇಕ್ ವೆಂಕಟೇಶ್ವರ್, ಮಂಜರಿ, ಹರಿ ನೀಲೇಶ್ ಸೇರಿದಂತೆ 64 ಪದವೀಧರರಿಗೆ ಚಿನ್ನದ ಪದಕ ಹಾಗೂ 120 ಪದವಿ ಸ್ನಾತಕೋತ್ತರದಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಲಾಯಿತು. ಕಾರ್ಯಕ್ರಮದಲ್ಲಿ ಕುಲಾಧಿಪತಿ ಡಾ.ಸಿ.ಜಿ.ಕೃಷ್ಣದಾಸ್ ನಾಯರ್, ಕುಲಪತಿಗಳಾದ ಡಾ. ಎನ್. ಸುಂದರ್‌ರಾಜನ್, ರಿಜಿಸ್ಟ್ರಾರ್ ಎನ್.ವಿ.ಎಚ್. ಕೃಷ್ಣನ್, ಉಪಕುಲಪತಿ ಡಾ. ಸಂದೀಪ್‌ಶಾಸ್ತ್ರೀ ಮತ್ತಿತರರು ಇದ್ದರು.